ದಿಃ 07-01-2017 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಗಿದೆ.

ಪಾಟೀ ಸವಾಲುಃ ಡಿಕ್ರಿದಾರರ ಪರ ವಕೀಲರಾದ ಶ್ರೀ ಬಿ.ಹೆಚ್. ಇವರಿಂದಃ

ನಿಪಿಃ40 (ಎ) ಈ ದಾಖಲೆ ನಿಪಿಃ40ರ ಗಣಕೀಕೃತ ದಾಖಲೆ ಅಂದರೆ ಸರಿ. ಅದನ್ನು ಗಣಕೀಕರಣ ಮಾಡಲು ನಾನು ಸಹಾಯ ಮಾಡಿರುತ್ತೇನೆ. ನಿಪಿಃ40 (ಎ) ಪ್ಯಾರಾ ನಂಬರ್ 2 ಇದರಲ್ಲಿ ಉಲ್ಲೇಖಿಸಿದ ಸರ್ವೆ ನಂಬರ್ 32 ಬೀರಪ್ಪ ಇತನ ಹಿಸ್ಸೆಗೆ ಹೋದ ಸ್ವತ್ತು ಅಂದರೆ ಸರಿ. ಸದರಿ ಪ್ಯಾರಾದಲ್ಲಿ ಬೀರಪ್ಪ ಇತನ ಪಾಲಿಗೆ 5 ಎಕರೆ ಮೂರುವರೆ ಗುಂಟೆ ಜಮೀನು ಹೋಗಿದೆ ಎಂದು ಬರೆಸಲಾಗಿದೆ ಅಂದರೆ ನಿಪಿಃ40ರಲ್ಲಿ ಇರುವ ವಿಷಯವನ್ನೇ ಬರೆಸಲಾಗಿದೆ ಎಂದು ಹೇಳುತ್ತಾರೆ. ನಿಪಿಃ40ರ ಪ್ರಕಾರ ಬೀರಪ್ಪ ಇತನ ಪಾಲಿಗೆ ಸರ್ವೆ ನಂಬರ್ 32ರಲ್ಲಿ ಹೋಗಿರುವ ಆಸ್ತಿಯು ಪೂರ್ವಕ್ಕೆ ಹರಪನಹಳ್ಳಿಯಿಂದ ದಾವಣಗೆರೆಯಿಂದ ಹೋಗುವ ಹಳೆ ರಸ್ತೆ, ಪಶ್ಚಿಮಕ್ಕೆ ಹರಿಹರದಿಂದ ಹರಪನಹಳ್ಳಿಗೆ ಹೋಗುವ ರಸ್ತೆ ಈ ಪ್ರಕಾರ ಬರೆಯಲಾಗಿದೆ ಎಂಬ ಪ್ರಶ್ನೆಗೆ ಅದು ತಪ್ಪಾಗಿ ಬರೆಯಲಾಗಿದೆ ಎಂದು ಸಾಕ್ಷಿದಾರರು ಹೇಳುತ್ತಾರೆ. ನನ್ನ ಪ್ರಕಾರ ಬೀರಪ್ಪ ಇತನಿಗೆ 4 ಎಕರೆ ಮೂರುವರೆ ಗುಂಟೆ ಜಮೀನು ಹೋಗಿರುತ್ತದೆ. 4 ಎಕರೆ ಮೂರುವರಗೆ ಗುಂಟೆ ಜಮೀನಿನ ಪೂರ್ವಕ್ಕೆ ಸರ್ವೆ ನಂಬರ್ 32ರ ಉಳಿದ ಸ್ವತ್ತು, ಪಶ್ಚಿಮಕ್ಕೆ ಮೈಸೂರು ಕಿರ್ಲೋಸ್ಕರ ಎಜ್ಯುಕೇಶನ್ ಟ್ರಸ್ಟ್ ಉತ್ತರಕ್ಕೆ ಬೀರಪ್ಪ ತಂದೆ ಕರೆಗೋವಿಂದಪ್ಪ ಇತನ ಜಮೀನು ಮತ್ತು ದಕ್ಷಿಣಕ್ಕೆ ಬೀರಪ್ಪರ ಸಹೋದರರನಾದ ನಾಗಪ್ಪನ ಇತನ ಹಿಸ್ಸೆಗೆ ಬಂದ ಜಮೀನು. ಈ ಕ್ಷೇತ್ರದ ಪೂರ್ವ ದಿಕ್ಕಿನಲ್ಲಿ ಅದೇ ಸರ್ವೆ ನಂಬರಿನಲ್ಲಿ ಎಷ್ಟು ಜಮೀನು ಉಳಿದಿದೆ ಹೇಳಲು ಬರುವುದಿಲ್ಲ. ಈ ಉಳಿದ ಜಮೀನು ಯಾರಿಗೆ ಸೇರಿದೆ ಎಂಬುದು ಹೇಳಲು ಬರುವುದಿಲ್ಲ. ಈ ಜಮೀನಿನ ವಿಸ್ತೀರ್ಣ ನನಗೆ ಗೊತ್ತಿಲ್ಲ.

ಮೇಲ್ಕಂಡ 4 ಎಕರೆ ಮೂರುವರೆ ಗುಂಟೆ ಜಮೀನಿನಲ್ಲಿ 1 ಎಕರೆ 20 ಗುಂಟೆ ಹೊರತುಪಡಿಸಿರುತ್ತದೆ.

2. 4 ಎಕರೆ ಮೂರುವರೆ ಗುಂಟೆ ಜಮೀನಿನ ಪೂರ್ವ ದಿಕ್ಕಿನಲ್ಲಿ ಅದೇ ಸರ್ವೆ ನಂಬರಿನಲ್ಲಿ ಉಳಿದ ಜಮೀನು ಇರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪೂರ್ವ ದಿಕ್ಕಿನಲ್ಲಿ ಯಾವುದೇ ಜಮೀನು ಇರದೇ ನಿಪಿಃ40ರಲ್ಲಿ ತೋರಿಸಿದ ಪ್ರಕಾರ ಹರಪನಹಳ್ಳಿಯಿಂದ ದಾವಣಗೆರೆಗೆ ಹೋಗುವ ಹಳೆ ರಸ್ತೆ ಮಾತ್ರ ಇದೆ ಅಂದರೆ ಸುಳ್ಳು. ಈ ರಸ್ತೆಯ ಪಶ್ಚಿಮ ದಿಕ್ಕಿನಲ್ಲಿ ಬೀರಪ್ಪ ಇತನಿಗೆ 4 ಎಕರೆ 5 ಗುಂಟೆ ಜಮೀನು ಹಿಸ್ಸೆ ಪ್ರಕಾರ ಬಂದಿರುತ್ತದೆ ಅಂದರೆ ಸರಿ. ಈ 4 ಎಕರೆ 5 ಗುಂಟೆ ಜಮೀನಿನ ಪಶ್ಚಿಮ ದಿಕ್ಕಿನಲ್ಲಿ ಕಿರ್ಲೋಸ್ಕರ ಎಜ್ಯುಕೇಶನ್ ಟ್ರಸ್ಟ್ ಇವರಿಗೆ ಸೇರಿದ ಕಟ್ಟಡ ಇದೆ ಅಂದರೆ ಸರಿ. 4 ಎಕರೆ 5 ಗುಂಟೆ ಕ್ಷೇತ್ರದಲ್ಲಿ ತನಗೆ ಹಿಸ್ಸೆ ಬೇಕೆಂದು ಪ್ರಸ್ತುತ ಡಿಕ್ರಿದಾರಳು ಕೇಸು ಹಾಕಿದ್ದಳು ಎಂಬ ವಿಚಾರ ನನಗೆ ಗೊತ್ತಿಲ್ಲ. 4 ಎಕರೆ 5 ಗುಂಟೆ ಪೈಕಿ ಡಿಕ್ರಿದಾರಳು 1 ಎಕರೆ 5 ಗುಂಟೆ ಜಮೀನನ್ನು ಕೋರ್ಟ್ ಡಿಕ್ರಿ ಮುಖಾಂತರ ಪಡಕೊಂಡಿರುತ್ತಾಳೆ. ನಿಆರ್ಃ3ರ ಪ್ರಕಾರ ಕೋರ್ಟ್ ಕಮೀಷನರ್ ಇವರು ಮೇಲ್ಕಂಡ 4 ಎಕರೆ 5 ಗುಂಟೆ ಜಮೀನಿನ ಪೈಕಿ ಡಿಕ್ರಿದಾರಕಳಿಗೆ 1 ಎಕರೆ 5 ಗುಂಟೆ ಜಮೀನು ಬಂದಿರುತ್ತದೆ ಎಂದು ತೋರಿಸಿರುತ್ತಾರೆ ಎಂದರೆ ಅದನ್ನು ಸೃಷ್ಟಿಸಿಕೊಂಡಿರುತ್ತಾರೆ ಎಂದು ಸಾಕ್ಷಿದಾರರು ಹೇಳುತ್ತಾರೆ. ನಿಆರ್ಃ3ರ ಪ್ರಕಾರ 18.4 ಮತ್ತು 18.4 ಇವರೆಡರ ಮಧ್ಯ 1 ಎಕರೆ 5 ಗುಂಟೆ ಜಮೀನನ್ನು ತೋರಿಸಲಾಗಿದೆ ಅಂದರೆ ಅದನ್ನು ಸೃಷ್ಟಿಸಿಕೊಂಡಿರುತ್ತಾರೆ ಎಂದು ಹೇಳುತ್ತಾರೆ, ಇವೆರಡರ ಮಧ್ಯದಲ್ಲಿ ಇರುವ ಜಮೀನನ್ನು ಅರ್ಜಿದಾರಳು ಕೋರ್ಟ್ ಮುಖಾಂತರ ಸ್ವಾಧೀನಪಡಿಸಿಕೊಂಡಿರುತ್ತಾರೆ ಅಂದರೆ ಸುಳ್ಳು. 1 ಎಕರೆ 5 ಗುಂಟೆ ಜಮೀನಿನ ಪೂರ್ವ

ಮತ್ತು ಪಶ್ಚಿಮಕ್ಕೆ ಮೇಲ್ಕಂಡ ಸರ್ವೆ ನಂಬರಿನಲ್ಲಿ ಉಳಿದ ಜಮೀನು, ಉತ್ತರಕ್ಕೆ ಗೋವಿಂದಪ್ಪ ಇತನ ಜಮೀನು ಮತ್ತು ದಕ್ಷಿಣಕ್ಕೆ ನಾಗಪ್ಪನ ಜಮೀನು ಇದೆ ಅಂದರೆ ಸುಳ್ಳು ಅದನ್ನು ಸೃಷ್ಟಿಸಲಾಗಿದೆ. ನಿಆರ್‌:3 ಇದನ್ನು ಕಾನೂನು ಬದ್ಧವಾಗಿ ತಯಾರಿಸಲಾಗಿದೆ ಅಂದರೆ ಸುಳ್ಳು. ನಿಆರ್‌:3 ನಕ್ಷೆಯನ್ನು ಅಂತಿಮ ಡಿಕ್ರಿ ಪ್ರಕರಣದಲ್ಲಿಯೇ ತಯಾರಿಸಲಾಗಿದೆ ಅಂದರೆ ಸುಳ್ಳು. ಈ ಎಲ್ಲಾ ಸಂಗತಿಗಳು ಕಾನೂನು ಬದ್ದವಾಗಿವೆ ಎಂಬ ವಿಷಯ ನನಗೆ ಗೊತ್ತಿದ್ದರೂ ಸಹ ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಈ ಸಮಯದಲ್ಲಿ ಶ್ರೀ ಬಿ.ಹೆಚ್ ಇವರು ಮುಂದಿನ ಪಾಟೀ ಸವಾಲಿಗಾಗಿ ಸಮಯ ಕೇಳಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾ.ದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,

ಹರಿಹರ.